739 739

ಮೈಸೂರ ಗಜಿತ.

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ, ನವಂಬರ್ ತಾ|| 1, ಸ್ಯ 1890.

☞ ಈ ಭಾಗವನ್ನು ಪ್ರತ್ಯೇಕ ಕೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯೆಗವರ್ನಮೆಂಟ್, ರೆಸಿಡೆಂಟರು, ಜೀಲ್ಲಾ ಜಡ್ಜ್ಗಳರು, ವಗ್ಗೈರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಇಸ್ತಿಹಾರ್ ನಾಮೆ.

ಫಾರೆಸ್ಟ್ ಇಲಾಖಾ.

ನಂ. 9. ತಾರೀಖು 29ನೇ ಸೆಪ್ಟಂಬರ್ 1890.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಮೈಸೂರು ದೇಶದಲ್ಲಿ ವುತ್ಪತ್ತಿಯಾದ ಗಂಧದ ಸಾಲೀಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಜಾಗಾಗಳಲ್ಲಿ ಅನುಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾಯ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರು ವ ಫಾರೆಸ್ಟ್ ಆಫೀಸರರುಗಳಿಂದ ನಡಿಸಲ್ಪಡುವವು.

ಶಿವಮೊಗ್ಗಾ ಡಿಸ್ಟ್ರಿಕ್ಟು ಸಿಕಾರಿಪುರದ ಕೋರಿ	14ನೇ ನವಂಬರ್ 1890	-ಹೆಚ್ಚು ಕಡಮೆ	250 ಟನ್ಗಳು.
ಶಿವಮೊಗ್ಗಾ ..	ಡಿಟೋ—17ನೇ	ಡಿಟೋ	450 ಡಿಟೋ
ತೀರ್ಥಹಳ್ಳಿ ..	ಡಿಟೋ—22ನೇ	ಡಿಟೋ	100 ಡಿಟೋ
ಕಡೂರು ಡಿಸ್ಟ್ರಿಕ್ಟು ಚಿಕ್ಕ ಮಗಳೂರು	ಡಿಟೋ—28ನೇ	ಡಿಟೋ	200 ಡಿಟೋ
ಹಾಸನ ಡಿಸ್ಟ್ರಿಕ್ಟು ಹಾಸನ	ಡಿಟೋ— 4ನೇ	ಡಿಸಂಬರ್	300 ಡಿಟೋ
ಮೈಸೂರು ಡಿಸ್ಟ್ರಿಕ್ಟು ಶ್ರೀರಂಗಪಟ್ಟಣ	ಡಿಟೋ—10ನೇ	ಡಿಟೋ	350 ಡಿಟೋ
ಹುಣಸೂರು ಡಿಟೋ	ಡಿಟೋ—15ನೇ	ಡಿಟೋ	450 ಡಿಟೋ
ಬೆಂಗಳೂರು ಡಿಸ್ಟ್ರಿಕ್ಟು	ಡಿಟೋ—20ನೇ	ಡಿಟೋ	150 ಡಿಟೋ

ಹರಾಜಿನ ಪರತ್ತುಗಳು—1887ನೇ ಇಸವಿ ಆಗಸ್ಟ್ 27 ಮತ್ತು ಸೆಪ್ಟಂಬರ್ 3ನೇ ಮುಕ್ತಂಗಳ 34, 35ನೇ ನಂಬರ್ ಗೆಜೆಟ್ಗಳಲ್ಲಿ ಪಾಯಿಷ್ ಮಾಡಲ್ಪಟ್ಟ ಇಸ್ತಿಹಾರ್ಗಳನ್ನ ನೋಡಿಕೊಳ್ಳತಕ್ಕದ್ದು. ಮತ್ತು ಸದರೀ ಇಸ್ತಿಹಾರ್ಗಳು ಹರಾಜ್ ಕಾಲದಲ್ಲಿ ವೋದ ಲ್ಪಡುವವು.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 18ನೇ ಮಾಹೇ 1890.

ನಂ. 1.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟನಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀ ವ ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆಕಂಡ ಜೋಡಿ ವ ಕಾಯಂಗುತ್ತಾ ಗ್ರಾಮಗಳು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ [illegible]ರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾ[illegible]ವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮಗಳು ಚಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯೂಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.